ಅಧ್ಯಕ್ಷರು : ಎಲ್ಲರ ಬಗ್ಗೆಯೂ ಹೇಳಿದ್ದಾರೆ. Joint responsibility. ಇವರಿಗೆ ಜಂಟಿ ಜವಾಬ್ದಾರಿ ಆಗಿದೆ. ಆದುದರಿಂದ ಐ.ಎ.ಎಸ್., ಐ.ಪಿ.ಎಸ್., ಕೆ.ಎ.ಎಸ್. ಎಲ್ಲಾ ಇದರಲ್ಲಿ ಸೇರಿದೆ. ನಾನ್ ಗೆಜೆಟೆಡ್ ಎಲ್ಲಾ ಸೇರಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಇರುವಾಗ ಅವರ ಬಾಯಿಂದ ಏನು ಬರುತ್ತದೆ ಎಂದು ನೋಡೋಣ. ಶಂಕದಿಂದ ತೀರ್ಥ ಬರಲಿ. ಸ್ವಲ್ಪ ನೋಡೋಣ. ಅವರ ಬಾಯಿಂದ ಸರ್ಕಾರದ ನೀತಿ ಬಗ್ಗೆ ಬರಲಿ.

ಅಧ್ಯಕ್ಷರು : ತೀರ್ಥ ಬೇಕಾದರೆ ದೇವಸ್ಥಾನಕ್ಕೆ ಹೋಗಬೇಕು. ಇಲ್ಲಿ ತೀರ್ಥ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ನೀತಿಯನ್ನು ವಿರೋಧಿಸಿ ಸಭಾತ್ಯಾಗ ಮಾಡಿ ನಾವು ದೇವಸ್ಥಾನಕ್ಕೆ ಹೋಗುತ್ತೇವೆ ಸ್ವಾಮಿ. ಈಶ್ವರಪ್ಪನವರೇ, ಈ ಬಂಡೆಯಂಥ ಸರ್ಕಾರದಲ್ಲಿ ಧರಣಿ ಮಾಡತಕ್ಕಂಥದ್ದು ಸರಿಯಲ್ಲ. ನೀವು ಕೂಡ ಸಭಾತ್ಯಾಗ ಮಾಡಿ ಬನ್ನಿ ಹೋಗೋಣ.

(ಮಾನ್ಯ ಈಶ್ವರಪ್ಪನವರು ಧರಣಿ ಮಾಡುತ್ತಿದ್ದು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಎಲ್ಲಿ ನಿಸ್ಪೃಹತೆಯಿಂದ ಅಧಿಕಾರಿಗಳು ಕೆಲಸ ಮಾಡಿದ್ದಾರೋ ಎಲ್ಲರಿಗೂ ರಕ್ಷಣೆ ಕೋಡುವ ಸಾಹಸ ಮಾಡಿ ಜನರ ಆಸ್ತಿ ಪ್ರಾಣ ಮಾನ ಕಾಪಾಡುವ ಕೆಲಸವನ್ನು ಅವರು ಮಾಡಿದ್ದಾರೆ ಅಂಥ ಅಧಿಕಾರಿಗಳಿಗೆ ಇವತ್ತು ರಕ್ಷಣೆ ಕೊಡುತ್ತಿಲ್ಲ. ಅವರನ್ನು ಚಂಡು ಮಾಡಿದ ಹಾಗೆ ಮಾಡಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಎಸೆಯುತ್ತಿರುವ ಈ ಸರ್ಕಾರದ ನೀತಿ ಪ್ರತಿಭಟಿಸಿ ನಾನು ಹೊರಗೆ ಹೋಗುತ್ತೇನೆ.

(ಮಾನ್ಯ ಶ್ರೀ ಚಂದ್ರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ಡಿ.ಬಿ. ಚಂದ್ರೇಗೌಡ : ಈ ವಿಚಾರದಲ್ಲಿ ನಾನು ಜವಾಬ್ದಾರಿ ವಿರೋಧ ಪಕ್ಷವಾಗಿ we have registered our protest and respectifully I accept your ruling.

ಆದ್ದರಿಂದ ನಾನು ಆ ತೀರ್ಮಾನಕ್ಕೆ ಹೋಗುವುದಿಲ್ಲ. ಬೆಂಗಳೂರಿನಲ್ಲಿ ಅನಧಿಕೃತವಾದ ಕರ್ಫ್ಯೂ ಇದೆಯೆಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಇವತ್ತು ಮುಖಪುಟದಲ್ಲಿ ಪ್ರಕಟಿಸಿದೆ. ಅದರಲ್ಲಿ ಮುಖ್ಯವಾಗಿ I quote the paper.

"Fierce clashes broke out between these two groups and several vehicles were burnt on Mavalli Road, J. C. Road, Siddaiah Road, Police Sources Said. At least 10 persons including 5 policemen were hospitalised."

I am glad to know that the senior police officers have done their best till late in the night.

ಆದ್ದರಿಂದ we cannot take this as an issue concerning only to Mavalli, area. ಈಗಿನ ಹಿಂದಿನ ಅನುಭವದ ಆಧಾರದ ಮೇಲೆ ಪರಿಸ್ಥಿತಿಯ ದುರ್ಲಾಭ ಪಡೆಯುವ ಅನೇಕ ರಾಜಕೀಯ ಶಕ್ತಿಗಳು ಇದರಲ್ಲಿವೆ, ಅವನ್ನು ನೀವೂ ಗುರುತಿಸಿದ್ದೀರಿ. ನಾವೂ ಗುರುತಿಸಿದ್ದೀವಿ. ದುರ್ಲಾಭ ಪಡೆಯುವುದಕ್ಕೆ ಅವಕಾಶ ಕೊಡದ ಹಾಗೆ ರಾಜ್ಯದ ಶಾಂತಿ ಸಮಾಧಾನ ಕಾದು ಕೊಂಡು ಬರುವುದಕ್ಕಾಗಿ ಇದರ ಪರಿಣಾಮ ಬೇರೆ ಕಡೆ ರಿಪ್ಲೆಕ್ಟ್ ಆಗದ ಹಾಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಆ ವಿಚಾರದಲ್ಲಿ ಬೆಂಗಳೂರಿನಲ್ಲಿರುವ ಕರ್ಫ್ಯೂ ಬಗ್ಗೆ ಗೃಹಸಚಿವರ ಹೇಳಿಕೆಯನ್ನು ನಾನು ಬಯಸುತ್ತೇನೆ.